ಕರ್ನಾಟಕ ಸರ್ಕಾರ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
**ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.**

**ಸಂಖ್ಯೆ : ವಾಸಾಸಂಇ : ಉ ನಿ : ಸುಮಪ : 2019–20** **ದಿನಾಂಕ: 30–07–2019**

# ಪತ್ರಿಕಾ ಆಮಂತ್ರಣ

1. **ಗೌರವಾನ್ವಿತ ರಾಷ್ಟ್ರಪತಿಯವರ ಪದಕ ಪ್ರದಾನ ಸಮಾರಂಭ – 2019**

**ಪದಕ ಪ್ರದಾನ:**

**ವಜುಭಾಯಿ ರೂಡಾಭಾಯಿ ವಾಲ,**
**ಗೌರವಾನ್ವಿತ ರಾಜ್ಯಪಾಲರು**
**ಕರ್ನಾಟಕ**

**ಅಧ್ಯಕ್ಷತೆ:**

**ಬಿ.ಎಸ್. ಯಡಿಯೂರಪ್ಪ,**
**ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ.**

**ದಿನಾಂಕ: 31–07–2019 ಬುಧವಾರ ಸಮಯ: ಸಂಜೆ 4.30 ಗಂಟೆಗೆ**

**ಸ್ಥಳ: ರಾಜಭವನ, ಬೆಂಗಳೂರು.**

## ಪತ್ರಿಕಾ ಪ್ರಕಟಣೆ

**ಬೆಂಗಳೂರು, ಜುಲೈ 30 ( ಕರ್ನಾಟಕ ವಾರ್ತೆ)**

ಮೀನುಗಾರರು ಹಾಗೂ ವಿಶೇಷವಾಗಿ ಮಹಿಳಾ ಮೀನುಗಾರರು, ಮೀನುಗಾರಿಕೆ ಚಟುವಟಿಕೆಗಳಾದ ಮೀನು ಮಾರಾಟ ಪರಿಕರಗಳ ಖರೀದಿ, ಮೀನಿನ ವ್ಯಾಪಾರಕ್ಕಾಗಿ ಬಂಡವಾಳ, ಮೀನಿನ ಸಂರಕ್ಷಣೆ ಹಾಗೂ ಸಾಗಾಣಿಕೆ ಇತರೆ ಮೀನುಗಾರಿಕೆ ಸಂಬಂಧಿತ ಚಟುವಟಿಕೆಗಳನ್ನು ಕೈಗೊಳ್ಳಲು ಆರ್ಥಿಕ ನೆರವು ನೀಡುವ ದೃಷ್ಟಿಯಿಂದ ಶೇಕಡಾ 2 ರಷ್ಟು ಬಡ್ಡಿದರದಲ್ಲಿ ವಾಣಿಜ್ಯ ಬ್ಯಾಂಕ್ ಮತ್ತು ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳಿಂದ ಸಾಲ ಪಡೆಯುವ ಯೋಜನೆಯನ್ನು ಮೀನುಗಾರಿಕೆ ಇಲಾಖೆ ಅನುಷ್ಠಾನಗೊಳಿಸುತ್ತಿದೆ.

ಈ ಯೋಜನೆಯಲ್ಲಿ ರೂ 50000/– ಗಳವರೆಗೆ ಸಾಲ ಪಡೆಯಲು ಅವಕಾಶವಿರುತ್ತದೆ. ಪಡೆದುಕೊಂಡ ಸಾಲವನ್ನು 24 ತಿಂಗಳೊಳಗೆ (2 ವರ್ಷ) ಬ್ಯಾಂಕುಗಳಿಗೆ ಮರುಪಾವತಿಸಿದ ಮೀನುಗಾರರು ವ್ಯತ್ಯಾಸದ ಬಡ್ಡಿ ಮೊತ್ತಕ್ಕೆ ಪ್ರಯೋಜನ ಪಡೆಯಲು ಅರ್ಹರಾಗುತ್ತಾರೆ.

ತಮಗೆ ಅನುಕೂಲವಾಗುವ ಮೀನುಗಾರಿಕೆ ಚಟುವಟಿಕೆಯ ಉದ್ದೇಶಗಳನ್ನು ಅಂತಿಮಗೊಳಿಸಿಕೊಂಡು ಇಲಾಖೆಗೆ ಅರ್ಜಿಗಳನ್ನು ಸಲ್ಲಿಸಿದ ನಂತರ ಸೂಕ್ತ ಶಿಫಾರಸ್ಸಿನೊಂದಿಗೆ ಅರ್ಜಿದಾರರ ವ್ಯಾಪ್ತಿಯ ಬ್ಯಾಂಕುಗಳಿಗೆ ಪ್ರಸ್ತಾವನೆಗಳನ್ನು ಸಲ್ಲಿಸಲಾಗುವುದು. ಪ್ರಸ್ತಾವನೆ ಪರಿಶೀಲನೆ ನಂತರ ಬ್ಯಾಂಕುಗಳು ಸಾಲವನ್ನು ಮಂಜೂರು ಮಾಡುತ್ತವೆ. ಈ ರೀತಿ ಸಾಲ ಪಡೆದುಕೊಂಡ ಮೀನುಗಾರರು 24 ತಿಂಗಳೊಳಗಾಗಿ ಸಾಲವನ್ನು ಮರುಪಾವತಿಸಿದಲ್ಲಿ ವ್ಯತ್ಯಾಸದ ಬಡ್ಡಿ ಮೊತ್ತದ ಪ್ರಯೋಜನೆ ಪಡೆಯುತ್ತಾರೆ.

2017–18 ಮತ್ತು 2018–19 ನೇ ಸಾಲಿನಲ್ಲಿ ಕರಾವಳಿಯ 3 ಜಿಲ್ಲೆಗಳಲ್ಲಿ ಒಟ್ಟು 23507 ಮೀನುಗಾರರ ರೂ 60.584 ಕೋಟಿ ಸಾಲ ವಸೂಲಾತಿಗೆ ಬಾಕಿ ಇರುತ್ತದೆ. ಹೀಗೆ ಒಟ್ಟು ಬಾಕಿ ಇರುವ ಸಾಲದ ಮೊತ್ತ ರೂ 60.584 ಕೋಟಿಗಳನ್ನು ಈ ದಿನ ನಡೆದ ನೂತನ ಸಚಿವ ಸಂಪುಟ ಸಭೆಯಲ್ಲಿ ಸರ್ಕಾರವು ಮನ್ನಾ ಮಾಡಿರುವುದರಿಂದ ಸುಮಾರು 23507 ಮೀನುಗಾರರು ಆರ್ಥಿಕ ಸಂಕಷ್ಟದಿಂದ ಹೊರಬಂದು ಅವರ ಜೀವನವನ್ನು ಸುಧಾರಿಸಿಕೊಂಡು ಸಮಾಜದಲ್ಲಿ ಉತ್ತಮ ಬದುಕು ಕಟ್ಟಿಕೊಳ್ಳಲು ಅವಕಾಶ ಕಲ್ಪಿಸಿಕೊಟ್ಟಂತಾಗಿದೆ ಎಂದು ಇಲಾಖೆ ಪ್ರಕಟಣೆ ತಿಳಿಸಿದೆ.

## ಫಲಿತಾಂಶ

ಬೆಂಗಳೂರು, ಜುಲೈ 30 ( ಕರ್ನಾಟಕ ವಾರ್ತೆ)

ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯು ಮೇ–2019ರ ಮಾಹೆಯಲ್ಲಿ ನಡೆಸಿದ ಡಿ.ಇಎಲ್.ಇಡಿ/ ಡಿ.ಇಡಿ ಮುಖ್ಯ ಪರೀಕ್ಷೆಯ ಫಲಿತಾಂಶವನ್ನು ದಿನಾಂಕ:31.07.2019 ರಂದು ಬೆಳಿಗ್ಗೆ 11:00 ಗಂಟೆಗೆ ಮಂಡಳಿಯ ವೆಬ್ ಸೈಟ್‌ನಲ್ಲಿ www.kseeb.kar.nic.in ಪ್ರಕಟಿಸಲಾಗುವುದು ಮತ್ತು ಫಲಿತಾಂಶ ಪಟ್ಟಿಯ ಹಾರ್ಡ್ ಪ್ರತಿಯನ್ನು ಆಯಾ ಜಿಲ್ಲಾ ಡಯಟ್‌ಗಳ ಮೂಲಕ ಸಂಬಂಧಿಸಿದ ಡಿ.ಇಡಿ ಕಾಲೇಜಿನ

**ಪ್ರಾಂಶುಪಾಲರಿಗೆ ಕಳುಹಿಸಲಾಗಿದೆ ಎಂದು ನಿರ್ದೇಶಕರು (ಇತರೆ ಪರೀಕ್ಷೆಗಳು), ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು ಇವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.**

## ಬೇಕರಿ ತರಬೇತಿ

**ಬೆಂಗಳೂರು, ಜುಲೈ 30 ( ಕರ್ನಾಟಕ ವಾರ್ತೆ)**

**ಬೇಕರಿ ತರಬೇತಿ ಘಟಕದ ವತಿಯಿಂದ 4 ವಾರಗಳ ಬೇಕರಿ ತರಬೇತಿ ಕಾರ್ಯಕ್ರಮವನ್ನು ಆಸಕ್ತಿಯುಳ್ಳ ಬೇಕರಿದಾರರಿಗೆ ಉದ್ದಿಮೆ ಮತ್ತು ಗೃಹಿಣಿಯರಿಗಾಗಿ ಆಯೋಜಿಸಲಾಗಿದೆ. ತರಬೇತಿ ದಿನಾಂಕ 05.08.2019 ರಿಂದ ಪ್ರಾರಂಭವಾಗಲಿದೆ. ಈ ತರಬೇತಿಯಲ್ಲಿ ಬ್ರೆಡ್, ಬನ್, ಪಪ್ಸ್, ಕೇಕ್‌ಗಳು, ವಿಶೇಷ ಬಿಸ್ಕತ್ತುಗಳು, ರೋಲ್ಸ್‌ಗಳು ಮತ್ತಿತರ ಆಕರ್ಷಕ ಬೇಕರಿ ಪದಾರ್ಥಗಳನ್ನು ತಯಾರಿಸಲು ಕಲಿಸಲಾಗುವುದು.**

**ಅಭ್ಯರ್ಥಿಗಳು ಸ್ವತ: ಪದಾರ್ಥ ತಯಾರಿಸುವ ಮೂಲಕ ಕಲಿಯುವ ಸೌಲಭ್ಯವಿದೆ. ಯಾವುದೇ ವಿದ್ಯಾರ್ಹತೆ ಅವಶ್ಯಕತೆಯಿಲ್ಲ. ತಯಾರಿಕೆಗೆ ಬೇಕಾದ ಕಚ್ಛಾ ಪದಾರ್ಥಗಳನ್ನ ತರಬೇತಿ ಘಟಕದಲ್ಲೇ ಒದಗಿಸಲಾಗುವುದು.ಹೆಚ್ಚಿನ ವಿವರಗಳಿಗೆ ಸಂಯೋಜಕರು, ಬೇಕರಿ ತರಬೇತಿ ಕೇಂದ್ರ, ವಿಸ್ತರಣಾ ನಿರ್ದೇಶನಾಲಯ, ಕೃಷಿ ವಿಶ್ವವಿದ್ಯಾನಿಲಯ, ಹೆಬ್ಬಾಳ, ಬೆಂಗಳೂರು-560 024, ಇವರನ್ನು ಖುದ್ದಾಗಿ ಅಥಾವ ದೂರವಾಣಿ ಸಂಖ್ಯೆ 080-23513370 ಮೂಲಕ ಕಛೇರಿಯ ಕೆಲಸದ ವೇಳೆಯಲ್ಲಿ ಸಂಪರ್ಕಿಸಲು ಕೋರಲಾಗಿದೆ.**

## ತೊಗರಿ ಬೆಳೆಯ ವಿಮೆ ನೋಂದಣಿಗೆ ಜುಲೈ 31 ಕಡೆಯ ದಿನ

**ಬೆಂಗಳೂರು, ಜುಲೈ 30 ( ಕರ್ನಾಟಕ ವಾರ್ತೆ)**

ಕಲಬುರಗಿ ಜಿಲ್ಲೆಯ ಎಲ್ಲಾ ರೈತ ಬಾಂಧವರ ಗಮನಕ್ಕೆ ತರುವುದೇನೆಂದರೆ, 2019-20 ನೇ ಸಾಲಿನ ಕರ್ನಾಟಕ ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲ ಭಿಮಾ (ವಿಮೆ) ಯೋಜನೆಯಡಿ (KRSPMFBY) ಮುಂಗಾರು ಹಂಗಾಮಿಗೆ ಜಿಲ್ಲೆಯ ಪ್ರಮುಖ ಬೆಳೆಯಾದ **ತೊಗರಿ ಮಳೆಯಾಶ್ರಿತ ಮತ್ತು** ನೀರಾವರಿ ಬೆಳೆಗೆ ಬೆಳೆ ವಿಮೆ ನೊಂದಣಿ ಮಾಡಿಸಲು ಕೊನೆಯ ದಿನಾಂಕ **31.07.2019** ಆಗಿರುತ್ತದೆ. ಪ್ರಸ್ತಕ ಸಾಲು ಮತ್ತು ಮುಂಗಾರು ಹಂಗಾಮಿನಲ್ಲಿ ಮಳೆ ಅಭಾವ ಅಥವಾ ಇತರೆ ಪ್ರತಿಕೂಲ ಹವಾಮಾನ ಪರಿಸ್ಥಿತಿಗಳಿಂದ ಅಥವಾ ಸ್ಥಳ, ನಿರ್ಧಿಷ್ಟ, ಪ್ರಕೃತಿ ವಿಕೋಪಗಳಾದ (Localized calamity), ಆಲಿಕಲ್ಲು ಮಳೆ (Hailstorm), ಭೂ ಕುಸಿತ (Land slide), ಬೆಳೆ ಮುಳುಗಡೆ (Inundation), ಮೇಘ ಸ್ಫೋಟ (Cloud Burst), ಮತ್ತು ಗುಡುಗು ಮಿಂಚುಗಳಿಂದಾಗಿ ಉಂಟಾಗುವ ಬೆಂಕಿ ಅವಗಡ (Natural fire due to lightning) ಸಂದರ್ಭದಲ್ಲಿ ಬೆಳೆ ನಷ್ಟವುಂಟಾದರೆ ರೈತರು ಬೆಳೆ ವಿಮೆಯ

ಸದುಪಯೋಗ ಪಡೆದುಕೊಳ್ಳಬಹುದಾಗಿದೆ. 2018–19 ನೇ ಸಾಲಿನ ಮುಂಗಾರಿನಲ್ಲಿ ಜಿಲ್ಲೆಯ ಒಟ್ಟು 10947 ರೈತರಿಗೆ ಒಟ್ಟು 10.65 ಕೋಟಿ ಬೆಳೆ ವಿಮೆ ಪರಿಹಾರ ಬಂದಿರುತ್ತದೆ. ಕಾರಣ ರೈತ ಬಾಂಧವರು ಉಳಿದ ಬೆಳೆಗಳ ಆಯ್ಕೆಗೆ ಹತ್ತಿರದ ರೈತ ಸಂಪರ್ಕ ಕೇಂದ್ರ ಅಥವಾ ತಾಲೂಕಿನ ಸಹಾಯಕ ಕೃಷಿ ನಿರ್ದೇಶಕರ ಕಚೇರಿಯನ್ನು ಹಾಗೂ ನೊಂದಣಿಗಾಗಿ ಹತ್ತಿರದ ಬ್ಯಾಂಕುಗಳಿಗೆ ಅಥವಾ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳಿಗೆ ಸಂಪರ್ಕಿಸಿ ಬೆಳೆ ವಿಮೆ ನೊಂದಣಿಯ ಸದುಪಯೋಗವನ್ನು ಪಡೆದುಕೊಳ್ಳಲು ಪ್ರಕಟಣೆ ತಿಳಿಸಿದೆ.

# Press Release

Karnataka State Financial Corporation (KSFC) has been playing a pivotal role in nurturing the MSME sector in the State for the last six decades. KSFC has contributed immensely in mentoring of first generation entrepreneurs, extending financial assistance to weaker section of the society, reaching out to SMEs in every district and in balanced industrial development across the State.

With the humble beginning of sanction of term loans to the extent of Rs. 28.00 lakh in 1959-60, the first year of its operation, the Corporation has reached an all-time high sanctions of Rs.1,098.73 crore in 2018-19, the 60th year of operations. KSFC is synonym with development of MSMEs in the State. Since inception the Corporation has sanctioned over Rs.17, 216.91 crore to as many as 1,73,507 MSMEs in the State.

During the last financial year, 2018-19, KSFC extended financial assistance of Rs.414.91 crore to Women Entrepreneurs, Rs.348.50 crore to Scheduled Caste & Scheduled Tribe Entrepreneurs and Rs.69.88 crore for Entrepreneurs belonging to Backward classes and Minority Communities.

KSFC has been the role model and a leading State Financial Corporation (SFC) in the country. The growth in operations during the 80s and 90s was significant. The impact of globalization, liberalization and introduction of Prudential and Provisioning norms to all term lending institutions along with the commercial banks, the corporation went through a lean phase in the late 90s. With its inherent strength, business acumen and generous help from Government

of Karnataka and SIDBI, the Corporation from the year 2003-04 has steadily recovered from the impact of external forces.

Many success stories of first generation entrepreneurs, the equivalent of Startups of today, like Infosys, Biocon, Reva Electric Cars, MTR, Sansera Engineering, 24/7 Customers.com, Ace Designers etc., are part of growth of KSFC. Today, they have grown manifold and stand testimony to the faith the Corporation had in them. Many more MSMEs have international fame and are big industrial houses today.

The core strength of KSFC is its professional team of experts drawn from various disciplines including from the disciplines of Engineering, Finance, Market Researchers, Economic / Statisticians, Information Technology experts and more. Customer centric approach with an emphasis on transparency in its operations is what makes KSFC standout among other peers.

**MILESTONE YEAR FOR KSFC**

During the financial year 2018-19, the diamond jubilee year, the Corporation sanctioned financial assistance to the tune of Rs.1,098.73 crore to MSMEs, disbursed an amount of Rs 665.90 crore. The recovery of loans was to the extent of Rs. 736.35 crore. The net profit for the Financial Year 2018-19 is Rs. 9.55 crore. The percentage of net NPA stood at 6.09%.

The above achievement is the result of a series of policy initiatives undertaken by the Corporation and implementation of flagship schemes of the Government of Karnataka through the Corporation, like the Interest Subsidy / Subvention for Micro and Small Enterprises (MSEs) promoted by SC/ST, Women and Manufacturing Enterprises promoted by General Category Entrepreneurs.

**PLANS FOR FY 2019-2020:**

The focus of KSFC for the financial year 2019-20 is on creation of a quality portfolio by keeping the modest target for sanction at Rs. 1,000.00 crore and to reach the benefits of flagship Interest Subsidy / Subvention Schemes of the Government of Karnataka to MSEs promoted by various sections of the society across the State. The focus will also be on further reduction in NPAs and increasing operating profits.

## BAKING COURSE

Bengaluru, July 30 (Karnataka Information)

The Bakery Training Unit, Hebbal, Bangalore Is conducting ***4 weeks training course on Bakery Technology*** for the benefit of Housewives and Entrepreneurs from **05.08.2019** . Bakery products like special Biscuits, Bread Rolls, Puffs, Cakes, etc will be taught during the course. Participants will be allowed to learn by preparing the products by themselves. The interested persons can contact Coordinator in person or through telephone no. **080-23513370** during office hours.

# Result

Bengaluru, July 30 (Karnataka Information)

As per the statement of Director (Other Exams), Karnataka Secondary Education Examination Board, Bangalore, the result of the D.El.Ed/D.Ed Main Examination conducted in May-2019 by Karnataka Secondary Education Examination Board, Bangalore, will be announced in the website www.kseeb.kar.nic.in on dated:31.07.2019 at 11:00AM. The hard copy of the result is sent to the colleges through concerned DIET.